ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸಭಾಂಗಣದಲ್ಲಿ ದಿನಾಂಕ 18–8–2012 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಹನ್ನೊಂದನೇಯ ಸಭೆಯ ನಡುವಳಿಗಳು:

ಉಪಸ್ಥಿತರಿದ್ದ ಸದಸ್ಯರು:

| | | |
|---|---|---|
| 1. | ಡಾ. ಬಿ.ವಿ. ಪಾಟೀಲ | ಅಧ್ಯಕ್ಷರು |
| 2. | ಶ್ರೀ ಭರತ್‌ಲಾಲ್ ಮೀನಾ | ಸದಸ್ಯರು |
| 3. | ಶ್ರೀ ಎಂ.ವಿ. ಗುತ್ತೇದಾರ | ಸದಸ್ಯರು |
| 4. | ಶ್ರೀ ಎಂ.ಎಸ್. ಸೋಮಲಿಂಗಪ್ಪ | ಸದಸ್ಯರು |
| 5. | ಶ್ರೀ ಅಲ್ಲಮಪ್ರಭು ಪಾಟೀಲ | ಸದಸ್ಯರು |
| 6. | ಶ್ರೀಮತಿ ಹೆಚ್.ಸಿ. ಆಶಾ ಶೇಷಾದ್ರಿ | ಸದಸ್ಯರು |
| 7. | ಶ್ರೀ ಬಸವರಾಜ ಪಾಟೀಲ್ ಇಟಗಿ | ಸದಸ್ಯರು |
| 8. | ಶ್ರೀ ವೆಂಕನಗೌಡ ಮಲ್ಕಾಪುರ | ಸದಸ್ಯರು |
| 9. | ಶ್ರೀ ಶಂಕರಗೌಡ ಹರವಿ | ಸದಸ್ಯರು |
| 10. | ಶ್ರೀ ಭೋಜನಗೌಡ | ಸದಸ್ಯರು |
| 11. | ಶ್ರೀ ಹನುಮೇಶ ನಾಯಕ | ಸದಸ್ಯರು |
| 12. | ಶ್ರೀ ಜಿ. ತಿಮ್ಮನಗೌಡ ಪಾಟೀಲ್ | ಸದಸ್ಯರು |
| 13 | ಡಾ. ಎಸ್.ಜಿ. ಪಾಟೀಲ | ಸದಸ್ಯರು |
| 14 | ಡಾ. ಪಿ. ಬಾಲಕೃಷ್ಣನ್ | ಸದಸ್ಯ–ಕಾರ್ಯದರ್ಶಿ |

ಪ್ರಾರಂಭದಲ್ಲಿ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹನ್ನೊಂದನೇಯ ಸಭೆಗೆ ಸರ್ವಸದಸ್ಯರನ್ನು ಮಾನ್ಯ ಕುಲಪತಿಗಳು ಹಾಗೂ ಅಧ್ಯಕ್ಷರು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು. ಕಾರ್ಯಸೂಚಿಯ ವಿಷಯವಾರು ಪ್ರಕಾರ ಒಂದೊಂದಾಗಿ ಚರ್ಚಿಸಿ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

| | |
|---|---|
| **ಅನುಕ್ರಮ ಸಂ: 1** | **ದಿನಾಂಕ 23–6–2012 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹತ್ತನೇಯ ಸಭೆಗಳ ನಡುವಳಿಗಳನ್ನು ಸ್ಥಿರೀಕರಿಸುವುದು ಮತ್ತು ಅವುಗಳ ಪ್ರಕಾರ ಕೈಗೊಂಡ ಕ್ರಮಗಳನ್ನು ಅನುಮೋದಿಸುವುದು** |

ಚರ್ಚೆಯ ಸಂದರ್ಭದಲ್ಲಿ, ರಾಜ್ಯದಲ್ಲಿರುವ ರಾಜೀವ್ ಗಾಂಧಿ ಹೌಸಿಂಗ್ ಕಾರ್ಪೋರೇಶನ್ ಅವರಿಗೆ ವಿಶ್ವವಿದ್ಯಾಲಯದ ದೊಡ್ಡ ಪ್ರಮಾಣದ ಸಿವಿಲ್ ಕಾಮಗಾರಿಗಳನ್ನು ವಹಿಸಿಕೊಡಲು ಪರಿಗಣಿಸುವಂತೆ ಮಾನ್ಯ ಸದಸ್ಯರಾದ ಶ್ರೀ ಗುತ್ತೇದಾರ ಅವರು ಸಲಹೆ ನೀಡಿದರು: ವ್ಯವಸ್ಥಾಪನಾ ಮಂಡಳಿಯ ಹಿಂದಿನ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕೃ.ವಿ.ವಿ. ರಾಯಚೂರು, ಸಿ.ಪಿ.ಡಬ್ಲ್ಯುಡಿ. ಯೊಂದಿಗೆ ಈಗಾಗಲೇ ಒಡಂಬಡಿಕೆ ಮಾಡಿಕೊಂಡಿರುತ್ತದೆ, ಹಾಗೂ ಅದರ ಪ್ರಕಾರ ಸಿವಿಲ್ ಕಾಮಗಾರಿಗಳ ಪ್ಲಾನ್ ಮತ್ತು ಎಸ್ಟಿಮೇಟ್‌ಗಳನ್ನು ಮುಂದಿನ ಕ್ರಮಕೈಗೊಳ್ಳಲು ಸದರಿಯವರಿಗೆ ಒದಗಿಸಿಕೊಡಲಾಗಿರುತ್ತದೆಯೆಂದು ಮಾನ್ಯ ಅಧ್ಯಕ್ಷರು ಘನ. ವೇದಿಕೆಯ ಗಮನಕ್ಕೆ ತಂದರು.

ಒಂದು ಹುದ್ದೆ ಮಾತ್ರ ಇರುವುದನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಬೇಕಾಗುತ್ತದೆಯೆಂಬ ನಿಯಮಿರುವ ಕುರಿತಾದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಕರ್ನಾಟಕ ಸರಕಾರ ಇವರಿಂದ ಸ್ವೀಕೃತವಾದ

ಪತ್ರವನ್ನು ಮಾನ್ಯ ಅಧ್ಯಕ್ಷರು ಸಭೆಯ ಗಮನಕ್ಕೆ ತರುತ್ತಾ ಅದರ ಪ್ರಕಾರ ಶ್ರೀ ಡಿ. ನಾರಾಯಣ ಇವರಿಗೆ ಉಪ-ಹಣಕಾಸು ನಿಯಂತ್ರಣಾಧಿಕಾರಿ ಎಂದು ನೀಡಿರುವ ಬಡ್ತಿಯನ್ನು ಹಿಂಪಡೆಯಬೇಕಾಗುತ್ತದೆಯೆಂದು ಮಾನ್ಯ ಅಧ್ಯಕ್ಷರು ಘನ ವೇದಿಕೆಯ ಗಮನಕ್ಕೆ ತಂದರು. ಆದಾಗ್ಯೂ, ವಿಶ್ವವಿದ್ಯಾಲಯದಲ್ಲಿ ಇನ್ನೊಂದು ಹುದ್ದೆ ಸೃಜಿಸುವವರೆಗೆ ಅಥವ ಕೃವಿವಿ ಧಾರವಾಡದಿಂದ ಈ ಹುದ್ದೆ ವರ್ಗಾವಣೆಯಾಗಿ ಬರುವವರೆಗೆ ಸದರಿಯವರನ್ನು ಪ್ರಭಾರಿ ಉಪ-ಹಣಕಾಸು ನಿಯಂತ್ರಣಾಧಿಕಾರಿಯೆಂದು ಮುಂದುವರೆಸಲು ವ್ಯವಸ್ಥಾಪನಾ ಮಂಡಳಿಯು ಸರ್ವಾನುಮತದಿಂದ ಸಲಹೆ ನೀಡಿತು.

**ಠರಾವು:**

ವಿಸ್ತೃತವಾದ ಚರ್ಚೆಯ ನಂತರ, ದಿನಾಂಕ 23-6-2012 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹತ್ತನೇಯ ಸಭೆಯ ನಡುವಳಿಗಳನ್ನು ಓದಲಾಯಿತೆಂದು ಪರಿಗಣಿಸಿ, ಸ್ಥಿರೀಕರಿಸಿ ಹಾಗೂ ಅವುಗಳ ಪ್ರಕಾರ ಕೈಕೊಂಡ ಕ್ರಮಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು)

| | |
|---|---|
| **ಅನುಕ್ರಮ ಸಂ: 2** | **ಉನ್ನತ ವ್ಯಾಸಂಗವಾದ ಪಿ.ಹೆಚ್.ಡಿ. ಪದವಿಯ ಅಧ್ಯಯನಕ್ಕಾಗಿ 2012-'13 ನೇ ಸಾಲಿನಲ್ಲಿ ಸೇವಾನಿರತ ಶಿಕ್ಷಕರು / ವಿಜ್ಞಾನಿಗಳಿಗೆ ಪ್ರತಿನಿಯೋಜನೆ ಸೌಲಭ್ಯವನ್ನು ನೀಡುವ ಕುರಿತು.** |

**ಠರಾವು:**

ಸುದೀರ್ಘ ಚರ್ಚೆಯ ನಂತರ, ಉನ್ನತ ವ್ಯಾಸಂಗವಾದ ಪಿ.ಹೆಚ್.ಡಿ. ಪದವಿಯ ಅಧ್ಯಯನಕ್ಕಾಗಿ 2012-'13 ನೇ ಸಾಲಿನಲ್ಲಿ ಸೇವಾನಿರತ ಶಿಕ್ಷಕರು / ವಿಜ್ಞಾನಿಗಳಿಗೆ ಕೃವಿವಿ ರಾಯಚೂರಿನಲ್ಲಿ ಪ್ರತಿನಿಯೋಜನೆ ಮಾಡಿದ ವಿಷಯಗಳನ್ನು ಪ್ರಸ್ತಾಪಿಸಿದಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಿದ್ದು ಈ ಕುರಿತು ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.

(ಕ್ರಮ : ಕುಲಸಚಿವರು)

| | |
|---|---|
| **ಅನುಕ್ರಮ ಸಂ: 3** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆವರಣದಲ್ಲಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು.** |

**ಠರಾವು:**

ಸುದೀರ್ಘ ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆವರಣದಲ್ಲಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಪಟ್ಟಿ ಮಾಡಿದ್ದರಲ್ಲಿ ಅನುಕ್ರಮವಾಗಿ ಕಡಿಮೆ ದರ ನಮೂದಿಸಿದ ಅರ್ಹ ಬಿಡ್‌ದಾರರುಗಳಿಗೆ ಆದೇಶಗಳನ್ನು ನೀಡಲು ಘನ ವೇದಿಕೆಯು ಅನುಮೋದನೆ ನೀಡಿತು.

(ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು)

| | |
|---|---|
| **ಅನುಕ್ರಮ ಸಂ: 4** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಅಧಿಕಾರಿಗಳ ನೇಮಕಾತಿಯ ಆಯ್ಕೆ ಪಟ್ಟಿಗೆ ಅನುಮೋದನೆ ಕುರಿತು.** |

ಚರ್ಚೆಯ ಸಂದರ್ಭದಲ್ಲಿ, ಕೃವಿವಿ ರಾಯಚೂರಿನ ಅಧಿಕಾರಿಗಳ ಸಾವಧಿಕ ಹುದ್ದೆಗಳ ಕುರಿತಾಗಿ ಇರುವ ಕೆಲವೊಂದು ತೊಂದರೆಗಳ ಬಗ್ಗೆ ಹಾಗೂ ಅವುಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಮಾನ್ಯ ಅಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿಗಳು (ಕೃಷಿ), ಕರ್ನಾಟಕ ಸರಕಾರ ಇವರುಗಳು ವಿವರಣೆ ನೀಡಿದರು.

**ಠರಾವು:**

ಸುದೀರ್ಘ ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಅಧಿಕಾರಿಗಳ ನೇಮಕಾತಿಯ ಆಯ್ಕೆ ಪಟ್ಟಿಗೆ ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡಿತು ಹಾಗೂ ಈ ಕುರಿತು ಸೂಕ್ತ ಆದೇಶಗಳನ್ನು ಹೊರಡಿಸಲು ಸಲಹೆ ನೀಡಿತು. ಮುಂದುವರೆದು, ನೇಮಕಾತಿಯ ಆಯ್ಕೆ ಪಟ್ಟಿಯಲ್ಲಿರುವವರ ಹೆಸರುಗಳನ್ನು ಕಾಯ್ದಿರಿಸಿದ ಅಭ್ಯರ್ಥಿಗಳೆಂದು ಇಡಲು ವ್ಯವಸ್ಥಾಪನಾ ಮಂಡಳಿಯು ಒಪ್ಪಿಗೆ ನೀಡಿರುತ್ತದೆ.

(ಕ್ರಮ : ಕುಲಸಚಿವರು)

| ಅನುಕ್ರಮ ಸಂ: 5 | **ಮನೆ ದುರಸ್ತಿ ಮುಂಗಡದ ಪ್ರಮಾಣವನ್ನು ಹೆಚ್ಚಿಸಲು ಅನುಮೋದನೆ ಕುರಿತು.** |
|---|---|

**ಠರಾವು:**

ವಿಸ್ತೃತ ಚರ್ಚೆಯ ನಂತರ, ಮನೆ ದುರಸ್ತಿ ಮುಂಗಡದ ಪ್ರಮಾಣವನ್ನು ಹೆಚ್ಚಿಸಲು ಪ್ರಸ್ತಾಪಿಸಲಾದ ಪ್ರಸ್ತಾವನೆಗೆ ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿಗಳು)

| ಅನುಕ್ರಮ ಸಂ: 6 | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳು.** |
|---|---|

ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆಡಳಿತ ಭವನದ ಕಟ್ಟಡ ಹಾಗೂ ಕೃಷಿ ಮಹಾವಿದ್ಯಾಲಯ ಗುಲಬರ್ಗಾದ ಕಟ್ಟಡದ ಶಂಕುಸ್ಥಾಪನಾ ಸಮಾರಂಭಕ್ಕೆ ಕರ್ನಾಟಕ ಸರಕಾರದ ಮಾನ್ಯ ಮುಖ್ಯಮಂತ್ರಿಗಳವರನ್ನು ಆಹ್ವಾನಿಸುವುದಾಗಿ ಮಾನ್ಯ ಅಧ್ಯಕ್ಷರು ಘನ ವೇದಿಕೆಯ ಗಮನಕ್ಕೆ ತಂದರು. ಅದರಂತೆಯೇ, ರದ್ದೇವಾಡಗಿಯ ಕೃಷಿ ವಿಜ್ಞಾನ ಕೇಂದ್ರದ ಉದ್ಘಾಟನಾ ಸಮಾರಂಭಕ್ಕೆ ಕಾರ್ಮಿಕ ಹಾಗೂ ಉದ್ಯೋಗ ಖಾತೆಯ ಕೇಂದ್ರ ಸಚಿವರಾದ ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರಿಗೆ ಆಹ್ವಾನಿಸಲಾಗುವುದೆಂದು ತಿಳಿಸಿದರು.

ರಾಜ್ಯದಲ್ಲಿ ಉದ್ಭವಿಸಿರುವ ಬರಗಾಲದ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು, ರೈತರರ ಭಾರವನ್ನು ತಗ್ಗಿಸುವ ಸಲುವಾಗಿ ಬೀಜಗಳ ದರಗಳನ್ನು ಕಡಿಮೆ ಮಾಡಲು ಮಾನ್ಯ ಸದಸ್ಯರಾದ ಶ್ರೀ ಭೋಜನಗೌಡ ಅವರು ಸಲಹೆ ನೀಡಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಉತ್ತರಿಸುತ್ತಾ, ಬೀಜಗಳ ದರಗಳು ಸರಕಾರವು ನಿಗದಿಪಡಿಸಿದ ದರಗಳಾಗಿರುತ್ತವೆ ಎಂದು ತಿಳಿಸಿದರು ಹಾಗೂ ಈ ಭಾಗದ ರೈತರಿಗೆ ಲಾಭವಾಗುವ ದೃಷ್ಟಿಯಿಂದ ವಿವಿಧ ರೀತಿಯ ಸಂಭವನೀಯ ಬೆಳೆ ಯೋಜನೆಗಳನ್ನು ಕೈಗೊಳ್ಳಲು ವಿಶ್ವವಿದ್ಯಾಲಯವು ಪ್ರಚಾರಪಡಿಸುವಲ್ಲಿ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆಯೆಂದು ತಿಳಿಸಿದರು.

ಪಾರದರ್ಶಕತೆಯನ್ನು ನಿರ್ವಹಿಸಿಕೊಂಡು ಹೋಗಲು ಹಾಗೂ ಫಲಾನುಭವಿಗಳ ತೃಪ್ತಿಕತೆಯನ್ನು ಉಳಿಸಿಕೊಂಡು ಬರುವ ಸಲುವಾಗಿ ಆಡು / ಕುರಿಗಳನ್ನು ಖರೀದಿಸುವಾಗ ಸಂಬಂಧಪಟ್ಟ ವಿಜ್ಞಾನಿಗಳು ಸದರಿ ಫಲಾನುಭವಿಗಳನ್ನು ಸಹ ಕರೆದುಕೊಂಡು ಹೋಗುವಂತೆ ಮಾನ್ಯ ಸದಸ್ಯರುಗಳು ಸಲಹೆ ನೀಡಿದರು.

ಗ್ರಾಮ ಪಂಚಾಯತ್ ಹಾಗೂ ರೈತ ಸಂಪರ್ಕ ಕೇಂದ್ರಗಳ ಮಟ್ಟದಲ್ಲಿ ರೈತರುಗಳೊಂದಿಗೆ ವಿಶ್ವವಿದ್ಯಾಲಯವು ಸಂಪರ್ಕವನ್ನಿಟ್ಟುಕೊಳ್ಳಲು ಹಾಗೂ ಅವರುಗಳೊಂದಿಗೆ ಸಂಭಾಷಿಸಲು ವೀಡಿಯೋ ಕಾನ್ಫರೆನ್ಸಿಂಗ್ ಸೌಲಭ್ಯವನ್ನು ಅಳವಡಿಸಿಕೊಳ್ಳುವಂತೆ ಮಾನ್ಯ ಸದಸ್ಯರು ಹಾಗೂ ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಅವರು ಸಲಹೆ ನೀಡುತ್ತಾ, ಇದಕ್ಕ ಸಂಬಂಧಿಸಿದಂತೆ ಸರಕಾರದಿಂದ ಅನುದಾನಕ್ಕಾಗಿ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಬಹುದೆಂದು ತಿಳಿಸಿದರು. ಈ ಕುರಿತಾಗಿ, ಈಗಾಗಲೇ ವಿಶ್ವವಿದ್ಯಾಲಯವು ಮಾಹಿತಿಗಳನ್ನು ವಾಯ್ಸ್ ಮೇಲ್ ಮತ್ತು ಟೆಕ್ಸ್ಟ ಮೇಲ್ ಮುಖಾಂತರ ರೈತರಿಗೆ ಲಾಭವಾಗುವ ರೀತಿಯಲ್ಲಿ ಕಳುಹಿಸಲಾಗುತ್ತಿದೆಯೆಂದು ಮಾನ್ಯ ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು.

ತದನಂತರ, ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಉದ್ಭವಿಸಿರುವ ಎಂ.ಆರ್.ಇ. ಅವರುಗಳ ಸಮಸ್ಯೆಗಳ ಕುರಿತು ಚರ್ಚಿಸಲಾಯಿತು, ಸಂಬಂಧಪಟ್ಟವರೊಡನೆ ಒಂದು ಸಭೆಯನ್ನು ಜರುಗಿಸಿ ಈ ವಿಷಯವನ್ನು ಆದಷ್ಟು ಬೇಗನೆ ಸೌಹಾರ್ದಯುತವಾಗಿ ಪರಿಹರಿಸಲು ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಅವರಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ವಿನಂತಿಸಿಕೊಂಡಿತು.

ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರ ದೇಶದ ಒಳಗಿನ ಶೈಕ್ಷಣಿಕ ಪ್ರವಾಸದ ಪ್ರಸ್ತಾವನೆಗೆ ಸಹ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಮಾನ್ಯ ವ್ಯವಸ್ಥಾಪನಾ ಮಂಡಳಿಯ ಉಪಸಮಿತಿಗಳನ್ನು ರಚಿಸುವ ಕುರಿತು ಚರ್ಚಿಸಲಾಗಿ, ಈ ಕೆಳಕಂಡ ಉಪಸಮಿತಿಗಳನ್ನು ರಚಿಸಲಾಯಿತು:

1. ಕಾಮಗಾರಿ ಸಮಿತಿ:

| | | |
|---|---|---|
| ಅಧ್ಯಕ್ಷರು | | ಡಾ. ಬಿ.ವಿ. ಪಾಟೀಲ, ಕುಲಪತಿಗಳು, ಕೃವಿವಿ ರಾಯಚೂರು |
| ಸದಸ್ಯರು | 1. | ಶ್ರೀ ಎಂ.ವಿ. ಗುತ್ತೇದಾರ |
| | 2. | ಶ್ರೀ ಎಂ.ಎಸ್. ಸೋಮಲಿಂಗಪ್ಪ |
| | 3. | ಶ್ರೀ ಜಿ. ತಿಮ್ಮನಗೌಡ ಪಾಟೀಲ್ |
| | 4. | ಶ್ರೀ ಹನುಮೇಶ ನಾಯಕ |
| | 5. | ಶ್ರೀ ಶಿವಪ್ಪ ಬಿ. ಬಲ್ಲಿದವ |
| ಸದಸ್ಯ–ಕಾರ್ಯದರ್ಶಿ | | ಕಾರ್ಯನಿರ್ವಾಹಕ ಅಭಿಯಂತರರು, ಕೃವಿವಿ ರಾಯಚೂರು |

2. ಫಾರ್ಮ್ ಅಭಿವೃದ್ಧಿ ಸಮಿತಿ:

| | | |
|---|---|---|
| ಅಧ್ಯಕ್ಷರು | | ಶ್ರೀ ವೆಂಕನಗೌಡ ಮಲ್ಕಾಪುರ |
| ಸದಸ್ಯರು | 1. | ಶ್ರೀಮತಿ ಹೆಚ್.ಸಿ. ಆಶಾ ಶೇಷಾದ್ರಿ |
| | 2. | ಶ್ರೀ ಜಿ. ತಿಮ್ಮನಗೌಡ ಪಾಟೀಲ್ |
| | 3. | ಶ್ರೀ ಬಸವರಾಜ ಪಾಟೀಲ್ ಇಟಗಿ |
| | 4. | ಶ್ರೀ ಭೋಜನಗೌಡ |
| | 5. | ಶ್ರೀ ಹನುಮೇಶ ನಾಯಕ |
| ಸದಸ್ಯ–ಕಾರ್ಯದರ್ಶಿ | | ಸಂಶೋಧನಾ ನಿರ್ದೇಶಕರು, ಕೃವಿವಿ ರಾಯಚೂರು |

3. ಕುಂದು ಕೊರತೆಗಳ ಸಮಿತಿ:

| | | |
|---|---|---|
| ಅಧ್ಯಕ್ಷರು | | ಶ್ರೀ ಎಂ.ಎಸ್. ಸೋಮಲಿಂಗಪ್ಪ |
| ಸದಸ್ಯರು | 1. | ಶ್ರೀ ಎಂ.ವಿ. ಗುತ್ತೇದಾರ |
| | 2. | ಶ್ರೀ ಅಲ್ಲಮಪ್ರಭು ಪಾಟೀಲ |
| | 3. | ಶ್ರೀ ಶಂಕರಗೌಡ ಹರವಿ |
| | 4. | ಶ್ರೀ ಶಿವಪ್ಪ ಬಿ. ಬಲ್ಲಿದವ |
| ಸದಸ್ಯ–ಕಾರ್ಯದರ್ಶಿ | | ಕುಲಸಚಿವರು, ಕೃವಿವಿ ರಾಯಚೂರು |

4. ವಿಸ್ತರಣೆ ಹಾಗೂ ಪ್ರಕಟಣಾ ಸಮಿತಿ:

| | | |
|---|---|---|
| ಅಧ್ಯಕ್ಷರು | | ಶ್ರೀ ಬಸವರಾಜ ಪಾಟೀಲ್ ಇಟಗಿ |
| ಸದಸ್ಯರು | 1. | ಶ್ರೀಮತಿ ಹೆಚ್.ಸಿ. ಆಶಾ ಶೇಷಾದ್ರಿ |
| | 2. | ಶ್ರೀ ಭೋಜನಗೌಡ |
| ಸದಸ್ಯ–ಕಾರ್ಯದರ್ಶಿ | | ವಿಸ್ತರಣಾ ನಿರ್ದೇಶಕರು, ಕೃವಿವಿ ರಾಯಚೂರು |

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಸಹಿ /– 18–8–2012
**(ಬಿ.ವಿ. ಪಾಟೀಲ)**
ಕುಲಪತಿಗಳು ಹಾಗೂ ಅಧ್ಯಕ್ಷರು
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

ಸಹಿ /– 18–8–2012
**(ಪಿ. ಬಾಲಕೃಷ್ಣನ್)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

**(ಪಿ. ಬಾಲಕೃಷ್ಣನ್)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.